# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 227

02. ಸದಸ್ಯರ ಹೆಸರು : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

03. ಉತ್ತರಿಸುವ ದಿನಾಂಕ : 06.07.2023

04. ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪೊಲೀಸ್ ಸಿಬ್ಬಂದಿಗಳ ವರ್ಗಾವಣೆ ನಿಯಮಗಳೇನು? ಒಂದು ಠಾಣೆಯಲ್ಲಿ ಪೊಲೀಸ್ ಸಿಬ್ಬಂದಿ ಎಷ್ಟು ಅವಧಿಯವರೆಗೆ ಕಾರ್ಯನಿರ್ವಹಿಸಬಹುದು; ವೃಂದವಾರು ಮತ್ತು ಆಯುಕ್ತಾಲಯವಾರು ವ್ಯತ್ಯಾಸಗಳಿದೆಯೇ; (ವಿವರ ನೀಡುವುದು) | ಪೊಲೀಸ್ ಇಲಾಖೆಯ ಜ್ಞಾಪನ ಸಂಖ್ಯೆ: ಸಿಬ್ಬಂದಿ-6/ 20/2012-13, ದಿನಾಂಕ: 17.08.2013 (ಅನುಬಂಧ-ಎ) ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಇ 2014, ದಿನಾಂಕ: 16.09.2014 (ಅನುಬಂಧ-ಬಿ) ಹಾಗೂ ಪೊಲೀಸ್ ಸಿಬ್ಬಂದಿ ಮಂಡಳಿಯ ನಿರ್ದೇಶನದನ್ವಯ ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆಗಳನ್ನು ಮಾಡಲಾಗುತ್ತಿದೆ.<br>ಇಲಾಖೆಯ ಸುತ್ತೋಲೆ ಮತ್ತು ಸರ್ಕಾರದ ಆದೇಶಗಳಲ್ಲಿ ನಿರ್ದೇಶಿಸಿರುವಂತೆ ಪಿಸಿ/ಹೆಚ್‌ಸಿ/ ಎಎಸ್‌ಐ ರವರುಗಳು ಒಂದು ಸ್ಥಳದಲ್ಲಿ ಕನಿಷ್ಠ 5 ವರ್ಷ ಹಾಗೂ ಪಿ.ಎಸ್.ಐ ವೃಂದದಲ್ಲಿ ಪೊಲೀಸ್ ಠಾಣೆಯ ಪ್ರಭಾರ ಹೊಂದಿರುವ ಠಾಣಾಧಿಕಾರಿ ಸಿಬ್ಬಂದಿಗಳು ಕರ್ನಾಟಕ ಪೊಲೀಸ್ ಕಾಯ್ದೆ 20(ಎಫ್) ರನ್ವಯ ಕನಿಷ್ಠ 1 ವರ್ಷ ಹಾಗೂ ಕಾರ್ಯ ಕಾರ್ಯೇತರ ಹುದ್ದೆಯಲ್ಲಿರುವವರು ಕನಿಷ್ಠ 2 ವರ್ಷ ಕಾರ್ಯ ನಿರ್ವಹಿಸಬಹುದು.<br>ವರ್ಗಾವಣೆ ನಿಯಮಗಳು ವೃಂದವಾರು ಮಾತ್ರ ಇದ್ದು, ಪ್ರತ್ಯೇಕವಾಗಿ ವೃಂದ ಅಥವಾ ಆಯುಕ್ತಾಲಯವಾರು ಇರುವುದಿಲ್ಲವಾದ್ದರಿಂದ ಇದರಿಂದಾಗಿ ಆಯುಕ್ತಾಲಯವಾರು ವ್ಯತ್ಯಾಸಗಳಿರುವುದಿಲ್ಲ. |
| ಆ) | ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳು ಹುದ್ದೆವಾರು ಬಡ್ತಿ ಸಹಿತ ವಿವಿಧ ಠಾಣೆಗಳಲ್ಲಿ ಕಾರ್ಯನಿರ್ವಹಿಸಿದ ಅವಧಿಯ ಕುರಿತು ಕೋಷ್ಟಕ ರೀತಿಯಲ್ಲಿ ಮಾಹಿತಿ ಲಭ್ಯವಿದೆಯೇ; ಇಲ್ಲದಿದ್ದಲ್ಲಿ, ಪ್ರಸ್ತುತ ಪೊಲೀಸ್ ಸಿಬ್ಬಂದಿಗಳ ವರ್ಗಾವಣೆಯನ್ನು ಯಾವ ಮಾನದಂಡದ ಆಧಾರದಲ್ಲಿ ಮಾಡಲಾಗುತ್ತಿದೆ; (ವಿವರ ನೀಡುವುದು) | ಹೌದು.<br>ಆಯಾ ಘಟಕಗಳಲ್ಲಿ ಠಾಣಾವಾರು ಕಾರ್ಯ ನಿರ್ವಹಣೆಯ ಕೋಷ್ಟಕ ನಿರ್ವಹಿಸಲಾಗುತ್ತಿದ್ದು, ಈ ಕುರಿತಂತೆ ಪೊಲೀಸ್ ಸಿಬ್ಬಂದಿ ಮಂಡಳಿ ಹಾಗೂ ಪ್ರಸ್ತುತ ಸರ್ಕಾರದ ಮಾರ್ಗಸೂಚಿಯ ಆಧಾರದ ಮೇಲೆ ಸಿಬ್ಬಂದಿಗಳ ಸೇವಾಜ್ಯೇಷ್ಠತೆ ಆಧಾರದ ಮೇಲೆ ಪಟ್ಟಿಯನ್ನು ಮಾಡಿ ನಂತರ ಎಲ್ಲಾ ಸಿಬ್ಬಂದಿಯವರಿಗೆ ಕೌನ್ಸಿಲಿಂಗ್ ನಡೆಸಿ ಅವರೆಲ್ಲರ ಸಮ್ಮುಖದಲ್ಲಿ ವರ್ಗಾವಣೆ ಮಾಡಲು ಬೆಂಗಳೂರು ನಗರ ಕಛೇರಿಯಲ್ಲಿ ಮಾಡಿರುವ ನಮೂನೆಯನ್ನು ಎಲ್ಲಾ ಘಟಕಾಧಿಕಾರಿಗಳಿಗೂ ಸಹ ಕಳುಹಿಸಲಾಗುತ್ತದೆ. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ವರ್ಗಾವಣೆಯನ್ನು ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲೇ ಮಾಡುವ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು) | ರಾಜ್ಯದಲ್ಲಿ ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಗಳ ಸಾರ್ವತ್ರಿಕ ವರ್ಗಾವಣೆಗಳನ್ನು ಸಾಮಾನ್ಯವಾಗಿ ಪ್ರತಿ ವರ್ಷ ಮೇ ಮತ್ತು ಜೂನ್ ತಿಂಗಳಿನಲ್ಲಿ ಮಾಡಲಾಗುತ್ತಿದೆ. ಈ ಕುರಿತಂತೆ ಸರ್ಕಾರವು ಆಗಿಂದಾಗ್ಗೆ ಹೊರಡಿಸಿರುವ ವರ್ಗಾವಣೆ ಮಾರ್ಗಸೂಚಿಯನ್ವಯ ಹಾಗೂ ಪೊಲೀಸ್ ಸಿಬ್ಬಂದಿ ಮಂಡಳಿಯು ಕಾಲಕಾಲಕ್ಕೆ ನೀಡುವ ನಿರ್ದೇಶನದನ್ವಯ ವರ್ಗಾವಣೆಗಳನ್ನು ಮಾಡಲಾಗುತ್ತಿದೆ. |
| ಈ) | ಪೊಲೀಸ್ ಸಿಬ್ಬಂದಿಗಳ ಸೇವಾವಧಿ ಹಿರಿತನವನ್ನು ಪರಿಗಣಿಸದೆ ಪೊಲೀಸ್ ಸಿಬ್ಬಂದಿಗಳ ವರ್ಗಾವಣೆಯನ್ನು ಮಾಡಲಾಗಿದೆಯೇ; ಮಾಡಿದ್ದಲ್ಲಿ, ಕಾರಣಗಳೇನು; (ವಿವರ ನೀಡುವುದು) | ವಿಶೇಷ ಸನ್ನಿವೇಶಗಳನ್ನು ಹೊರತುಪಡಿಸಿ ಪೊಲೀಸ್ ಸಿಬ್ಬಂದಿಗಳ ಸೇವಾವಧಿ ಹಿರಿತನವನ್ನು ಪರಿಗಣಿಸದೆ ಪೊಲೀಸ್ ಸಿಬ್ಬಂದಿಗಳ ವರ್ಗಾವಣೆಯನ್ನು ಸಾಮಾನ್ಯವಾಗಿ ಮಾಡುವುದಿಲ್ಲ. |
| ಉ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪೊಲೀಸ್ ಠಾಣೆಗಳು ಯಾವುವು; ಅವುಗಳಲ್ಲಿ ಒಂದೇ ಠಾಣೆಯಲ್ಲಿ ಐದು ವರ್ಷಕ್ಕಿಂತ ಜಾಸ್ತಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಠಾಣಾವಾರು ವಿವರವನ್ನು ನೀಡುವುದು) | ವಿವರವನ್ನು **'ಅನುಬಂಧ-ಸಿ'** ರಲ್ಲಿ ಇರಿಸಿದೆ. |
| ಊ) | ಪೊಲೀಸ್ ಇಲಾಖೆಯಲ್ಲಿ ಬಾಕಿಯಿರುವ ಬಡ್ತಿಯನ್ನು ನೀಡಲು ಮತ್ತು ಸೇವಾವಧಿ ವೇತನ ತಾರತಮ್ಯ ಸರಿಪಡಿಸಲು ನಿಯಮಾನುಸಾರ ಕ್ರಮವಹಿಸಲಾಗಿದೆಯೇ? (ವಿವರ ನೀಡುವುದು) | ಹೌದು.<br>ಪೊಲೀಸ್ ಇಲಾಖೆಯಲ್ಲಿ ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಅಧಿಕಾರಿ/ ಸಿಬ್ಬಂದಿಗಳ ವೇತನ ತಾರತಮ್ಯ ಸರಿಪಡಿಸಲು ನಿಯಮಾನುಸಾರ ಕಾಲಕಾಲಕ್ಕೆ ಕ್ರಮ ವಹಿಸಲಾಗುತ್ತಿದೆ. |

**HD/93/PPS/2023**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು

ಅನುಬಂಧ - ಬಿ.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಸಿಬ್ಬಂದಿ-6/20/2012-13

ದಿನಾಂಕ: 17/08/2013

## ಜ್ಞಾಪನ

ವಿಷಯ: ವಲಯ/ಘಟಕ ಮಟ್ಟದ ಮತ್ತು ಜಿಲ್ಲಾ ಮಟ್ಟದ ಪೊಲೀಸ್ ಸಿಬ್ಬಂದಿ ಮಂಡಳಿಗಳು ಮಾಡಬಹುದಾದ ವರ್ಗಾವಣೆಗಳ ಬಗ್ಗೆ ಮಾರ್ಗಸೂಚಿಗಳು.

ಉಲ್ಲೇಖ:
1. ದಿನಾಂಕ: 11/07/2013 ರಂದು ಡಿಜಿ ಮತ್ತು ಐಜಿಪಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ಪೊಲೀಸ್ ಸಿಬ್ಬಂದಿ ಮಂಡಳಿಯ ನಡವಳಿಗಳು.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿಬ್ಬಂದಿ-1/62/2012-13, ದಿನಾಂಕ: 16/07/2013.
3. ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರ ಅ.ಸ. ಪತ್ರ ಸಂಖ್ಯೆ: ಬಿಸಿಪಿ/ಸಿಬಿ-1/ಟಿಇಬಿ/2013, ದಿನಾಂಕ: 30/07/2013

* * *

ಪೊಲೀಸ್ ಕಮೀಷನರ್, ಬೆಂಗಳೂರು ನಗರ ಮತ್ತು ಸದಸ್ಯರು, ಪೊಲೀಸ್ ಸಿಬ್ಬಂದಿ ಮಂಡಳಿ, ಬೆಂಗಳೂರು ರವರಿಂದ ಸಿದ್ಧಪಡಿಸಲಾದ ಮಾದರಿ ವರ್ಗಾವಣಾ ಮಾರ್ಗಸೂಚಿಗಳನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ.

(ಸೈಯದ್ ಉಲ್ಫತ್ ಹುಸೇನ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ

ಇವರಿಗೆ:

1. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕೆಎಸ್‌ಆರ್‌ಪಿ / ಸಿ.ಎಲ್&ಎಂ / ಡಿಸಿಆರ್‌ಇ / ರೈಲ್ವೇಸ್ ಮತ್ತು ರಾಜ್ಯಗುಪ್ತವಾರ್ತೆ, ಬೆಂಗಳೂರು.
2. ಪೊಲೀಸ್ ಆಯುಕ್ತರು, ಬೆಂಗಳೂರು ನಗರ / ಮೈಸೂರು ನಗರ / ಹುಬ್ಬಳ್ಳಿ-ಧಾರವಾಡ ನಗರ ಮತ್ತು ಮಂಗಳೂರು ನಗರ.
3. ಎಲ್ಲಾ ವಲಯಗಳ ಪೊಲೀಸ್ ಮಹಾನಿರೀಕ್ಷಕರುಗಳಿಗೆ.
4. ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು, ಕೆ.ಜಿ.ಎಫ್, ವೈರ್‌ಲೆಸ್ & ರೈಲ್ವೇಸ್, ಬೆಂಗಳೂರು ಸೇರಿದಂತೆ.

## ಪಿಸಿ, ಹೆಚ್‌ಸಿ ಹಾಗೂ ಎ.ಎಸ್.ಐಗಳ ವರ್ಗಾವಣೆ ಬಗ್ಗೆ ಟಿಪ್ಪಣಿ:-

ಪಿಸಿ, ಹೆಚ್‌ಸಿ ಹಾಗೂ ಎ.ಎಸ್.ಐ ಗಳು ಪೊಲೀಸ್ ಠಾಣೆಯ ಪ್ರಮುಖ ಅಂಗವಾಗಿದ್ದು, ಸಾರ್ವಜನಿಕರೊಂದಿಗೆ ಹೆಚ್ಚಿನ ಸಂಪರ್ಕದಲ್ಲಿರುತ್ತಾರೆ. ಅದಲ್ಲದೆ, ಅವರು ಕರ್ತವ್ಯ ನಿರ್ವಹಿಸಲು ಕೈಗೊಳ್ಳಬೇಕಾದ ಪ್ರಯಾಣ ಮತ್ತು ಅವರ ಕೆಲವು ಕೌಟುಂಬಿಕ ಸಮಸ್ಯೆಗಳನ್ನೂ ಸಹ ಗಮನದಲ್ಲಿಟ್ಟುಕೊಂಡು ವರ್ಗಾವಣೆ ಮಾಡುವುದು ಸಮಂಜಸವಾದ ವಿಷಯ. ಆದರೆ, ಸಾರ್ವಜನಿಕ ಹಿತಾಸಕ್ತಿಯು ವೈಯುಕ್ತಿಕ ಸಮಸ್ಯೆಗಿಂತ ಮುಖ್ಯವಾದುದು ಎನ್ನುವುದನ್ನು ನಿರಾಕರಿಸಲಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸಿಬ್ಬಂದಿಗಳ ವರ್ಗಾವಣೆ ಬಗ್ಗೆ ಈ ಕೆಳಗಂಡಂತೆ ಮಾರ್ಗಸೂಚಿ ನಿರ್ಧರಿಸಬಹುದು:

1) ವರ್ಗಾವಣೆಗಳನ್ನು ಸರ್ಕಾರದ ಮಾರ್ಗಸೂಚಿ ಆಧಾರದ ಮೇಲೆ ಮಾತ್ರ ಮಾಡುವುದು.
2) ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಯಿಂದ ಇನ್ನೊಂದು ಠಾಣೆಗೆ ವರ್ಗಾವಣೆ ಮಾಡುವಾಗ ಅದೇ ಉಪ ವಿಭಾಗದ ಠಾಣೆಯಲ್ಲಿ ನೇಮಕ ಮಾಡಕೂಡದು..
3) ಅವರು ಈ ಹಿಂದೆ ಕರ್ತವ್ಯ ನಿರ್ವಹಿಸಿದ ಠಾಣೆಯಲ್ಲಿಯೆ ಪುನಃ ನೇಮಕ ಮಾಡಕೂಡದು.
4) ಪಿ.ಸಿಯಿಂದ ಹೆಚ್‌ಸಿ, ಹೆಚ್.ಸಿ.ಯಿಂದ ಎ.ಎಸ್.ಐ. ಹುದ್ದೆಗೆ ಬಡ್ತಿ ಹೊಂದಿ ಅದೇ ಠಾಣೆಯಲ್ಲಿ ಮುಂದುವರಿಸುವುದನ್ನೂ ಸಹ ಮಾಡಕೂಡದು.
5) ಸ್ವಂತ ಸ್ಥಳವಿರುವ ಸರಹದ್ದಿನ ಠಾಣೆಯಲ್ಲಿ ನೇಮಕ ಮಾಡಕೂಡದು
6) ಈ ಮೇಲಿನ ಅಂಶಗಳ ಆಧಾರದ ಮೇಲೆ ಮಾರ್ಗಸೂಚನೆಗಳನ್ನು ತಯಾರು ಮಾಡಿ ಎಲ್ಲಾ ಸಿಬ್ಬಂದಿಯವರಿಂದ ಅವರಿಗೆ ಬೇಕಾದಂತಹ 3 ಅಥವಾ 4 ಠಾಣೆಗಳಿಗೆ ಆದ್ಯತೆಯನುಸಾರ ಇಚ್ಛಾ ಪತ್ರಗಳನ್ನು ಪಡೆದು ಅನಂತರ ಎಸ್.ಪಿ ಅಥವಾ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೇವಾ ಜೇಷ್ಠತಾ ಆಧಾರದ ಮೇಲೆ ಒಂದು ಪಟ್ಟಿ ತಯಾರಿಸುವುದು. ಈ ಪಟ್ಟಿಯನ್ನು ಈ ಕೆಳಗಿನ ಮಾದರಿಯಲ್ಲಿ ತಯಾರಿಸಬಹುದು.

| ಕ್ರ ಸಂ. | ಹೆಸರು, ಪದನಾಮ ಮತ್ತು ಬಿಲ್ಲೆ ಸಂಖ್ಯೆ | ಸ್ವಂತ ಸ್ಥಳ | ಕರ್ತವ್ಯಕ್ಕೆ ಸೇರಿದ ದಿನಾಂಕ | ಈ ಹಿಂದೆ ಕರ್ತವ್ಯ ನಿರ್ವಹಿಸಿದ ಸ್ಥಳ | ಸಿಬ್ಬಂದಿಯವರು ಕೋರಿದ ಠಾಣೆಗಳ ವಿವರಗಳು | ಕೌನ್ಸಿಲಿಂಗ್‌ನಲ್ಲಿ ವರ್ಗಾವಣೆ ಮಾಡಿದ ಸ್ಥಳ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ನೈಪುಣ್ಯತೆ ಹೊಂದಿದ ಸಿಬ್ಬಂದಿ ಉದಾ: ಬರಹಗಾರರು, ತನಿಖಾ ಸಹಾಯಕರು, ಕಂಪ್ಯೂಟರ್ ನಿರ್ವಾಹಕರು ಮುಂತಾದವರಿಗೆ ಸಂಬಂಧಿಸಿದ ವರ್ಗಾವಣೆ ಸಮಿತಿ ನಿರ್ಣಯ ತೆಗೆದುಕೊಂಡು, ಅವರಿಗೆ ವಿನಾಯಿತಿ ನೀಡಿ ನೇಮಕ ಮಾಡಬಹುದು.

ಈ ರೀತಿ ಒಂದು ಪಟ್ಟಿಯನ್ನು ಮಾಡಿ ನಂತರ ಎಲ್ಲಾ ಸಿಬ್ಬಂದಿಯವರಿಗೆ ಕೌನ್ಸಿಲಿಂಗ್‌ಗೋಸ್ಕರ ಒಂದು ದಿವಸ ಕರೆಯಿಸಿ ಅವರ ಜೇಷ್ಠತಾ ಆಧಾರದ ಮೇಲೆ ಅವರೆಲ್ಲ ಸಮ್ಮುಖದಲ್ಲಿ ಅವರು ಕೋರಿದ ಹಾಗೂ ಖಾಲಿಯಿರುವ ಠಾಣೆಗಳಲ್ಲಿ ನೇಮಕ ಮಾಡಿದರೆ, ಇಡೀ ವರ್ಗಾವಣೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ಸಿಬ್ಬಂದಿಗಳಿಗೆ ನೈಸರ್ಗಿಕ ನ್ಯಾಯ ಒದಗಿಸಿದಂತಾಗುತ್ತದೆ.

ಪೊಲೀಸ್ ಆಯುಕ್ತರು,
ಬೆಂಗಳೂರು ನಗರ.

ಅನುಬಂಧ - ಬಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಪೊಲೀಸ್ ಇಲಾಖೆಯ ಅಧಿಕಾರಿ/ನೌಕರರ ವರ್ಗಾವಣೆ ಬಗ್ಗೆ ಮಾರ್ಗಸೂಚಿಗಳು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009, ದಿನಾಂಕ: 24-08-2009.
2. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾ-2), ದಿನಾಂಕ: 13-01-2011.
3. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 4 ಎಸ್‌ಟಿಆರ್ 2001, ದಿನಾಂಕ: 22-11-2001.
4. ಸರ್ಕಾರದ ಆದೇಶ ಸಂಖ್ಯೆ: ಒಇ 60 ಪೊಸಇ 2009 (ಭಾ-2), ದಿನಾಂಕ: 21-05-2011.
5. ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ: ಸಿಜಿ-4/3/2013-14, ದಿನಾಂಕ: 31-05-2014.

*****

14 OCT 2014
ಬೆಂಗಳೂರು

53576

**ಪ್ರಸ್ತಾವನೆ:**

ಮೇಲೆ ಓದಲಾದ...(4)ರ ಆದೇಶದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ/ನೌಕರರ ವರ್ಗಾವಣೆ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಉಲ್ಲೇಖ (5) ರಲ್ಲಿರುವ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಕರ್ನಾಟಕ ಪೊಲೀಸ್ (ತಿದ್ದುಪಡಿ) ಅಧಿನಿಯಮಕ್ಕೆ ತಿದ್ದುಪಡಿ ತಂದಿದ್ದು ಆ ಮೂಲಕ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವರ್ಗಾವಣೆಯನ್ನು ಪೊಲೀಸ್ ಸಿಬ್ಬಂದಿ ಮಂಡಳಿಯು ಮಾಡಬೇಕಾಗಿರುವುದರಿಂದ ಪೊಲೀಸ್ ಉಪ ವಿಭಾಗ, ವೃತ್ತ ಮತ್ತು ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿವಿಲ್ ವೃಂದದ ಅಧಿಕಾರಿ/ಸಿಬ್ಬಂದಿಗಳ ವರ್ಗಾವಣೆಗೆ ಪೊಲೀಸ್ ಸಿಬ್ಬಂದಿ ಮಂಡಳಿಯು ಪ್ರತಿಯೊಂದು ವೃಂದಗಳಿಗೆ ವರ್ಗಾವಣಾ ಮಾರ್ಗ ಸೂಚಿಗಳನ್ನು ಅಳವಡಿಸಲು ಸಲಹೆ ನೀಡಿದ್ದು, ಪೊಲೀಸ್ ಸಿಬ್ಬಂದಿ ಮಂಡಳಿಯ ಸಲಹೆಯನ್ನು ಪರಿಗಣಿಸಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವರ್ಗಾವಣಾ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

D.G.P. Adm

**ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಇ 2014**
**ಬೆಂಗಳೂರು, ದಿನಾಂಕ: 16-09-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯ ಪೊಲೀಸ್ ಉಪಾಧೀಕ್ಷಕರು (ಸಿವಿಲ್), ಪೊಲೀಸ್ ನಿರೀಕ್ಷಕರು (ಸಿವಿಲ್), ಪೊಲೀಸ್ ಉಪನಿರೀಕ್ಷಕರು (ಸಿವಿಲ್), ಪೊಲೀಸ್ ಎಎಸ್‌ಐ/ಹೆಚ್‌ಸಿ/ಪಿಸಿ (ಸಿವಿಲ್) ವೃಂದಗಳಿಗೆ ಸಂಬಂಧಿಸಿದಂತೆ ಸರ್ಕಾರವು

CO/Estt.
CAO 16/10/14

ಕೆಲವೊಂದು ಪ್ರಕರಣಗಳಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಸಡಿಲಗೊಳಿಸುವ (On Extraordinary circumstances) ಷರತ್ತಿಗೊಳಪಟ್ಟು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1, 2, 3 ಮತ್ತು 4 ರಲ್ಲಿರುವ ವರ್ಗಾವಣಾ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ದೇವೇಂದ್ರಪ್ಪ ಕಟ್ಟಿಮನಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು-ಎ)

ಇವರಿಗೆ,

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಇದನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-3) ಶಾಖೆ, ನಂ. 224, 2ನೇ ಮಹಡಿ, ವಿಧಾನಸೌಧ, ಬೆಂಗಳೂರು ಇಲ್ಲಿಗೆ ಅಧಿಸೂಚನೆಯ 100 ಪ್ರತಿಗಳನ್ನು ಒದಗಿಸಲು ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ, ಬೆಂಗಳೂರು.
4. ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.
6. ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಗೃಹ ರಕ್ಷಕ ದಳ, ಬೆಂಗಳೂರು.
7. ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಸಿಐಡಿ, ಬೆಂಗಳೂರು.
8. ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ತರಬೇತಿ, ಬೆಂಗಳೂರು.
9. ಡೈರೆಕ್ಟರ್ ಜನರಲ್ ಆಫ್ ಪೊಲೀಸ್, (Research & Restructuring) ಹುಬ್ಬಳ್ಳಿ-ಧಾರವಾಡ.
10. ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು.
11. ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು (ಆಡಳಿತ), ಬೆಂಗಳೂರು.
12. ಪೊಲೀಸ್ ಆಯುಕ್ತರು, ಬೆಂಗಳೂರು/ಮೈಸೂರು/ಹುಬ್ಬಳ್ಳಿ-ಧಾರವಾಡ.

ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಆ 2014, ದಿನಾಂಕ: 16-09-2014ಕ್ಕೆ

ಅನುಬಂಧ-1

(ಪೊಲೀಸ್ ಉಪಾಧೀಕ್ಷಕರು (ಸಿವಿಲ್))

1) ಪೊಲೀಸ್ ಉಪಾಧೀಕ್ಷಕರಾಗಿ ಕಾರ್ಯಕಾರಿ ಹುದ್ದೆಯಲ್ಲಿ ಗರಿಷ್ಠ ಸೇವಾ ಅವಧಿ-8 ವರ್ಷಗಳು ಪೂರೈಸಿರಬೇಕು.

2) ಪೊಲೀಸ್ ಉಪಾಧೀಕ್ಷಕರಾಗಿ ಕಾರ್ಯಕಾರಿ ಹುದ್ದೆಯಲ್ಲಿ ಗರಿಷ್ಠ 3 ವರ್ಷ ಮತ್ತು ಕಾರ್ಯಕಾರ್ಯೇತರ ಹುದ್ದೆಯಲ್ಲಿ ಗರಿಷ್ಠ 4 ವರ್ಷ ಸೇವಾ ಅವಧಿಯನ್ನು ಪ್ರತಿ ಹುದ್ದೆಯಲ್ಲಿ ಸಲ್ಲಿಸಿರಬೇಕು.

3) ಪೊಲೀಸ್ ಉಪಾಧೀಕ್ಷಕರಾಗಿ ಅನುಕ್ರಮವಾಗಿ 3 ಹುದ್ದೆಗಳಲ್ಲಿ ಅಥವಾ ಗರಿಷ್ಠ 8 ವರ್ಷಗಳ ಕಾಲ ಕಾರ್ಯಕಾರ್ಯೇತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುವವರು ಕಡ್ಡಾಯವಾಗಿ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಒಂದು ವೇಳೆ ಅವರು ಸ್ವತಃ ಲಿಖಿತ ಮೂಲಕ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸದ ಹೊರತು ಕಾರ್ಯಕಾರಿ ಹುದ್ದೆಯಲ್ಲಿಯೇ ಕರ್ತವ್ಯ ನಿರ್ವಹಿಸಬೇಕು.

4) ಪೊಲೀಸ್ ಉಪಾಧೀಕ್ಷಕರು, ಅವರ ಸ್ವಸ್ಥಳದ ಉಪ ವಿಭಾಗದಲ್ಲಿ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಕೂಡದು. ಬೆಂಗಳೂರು ನಗರ ಸ್ವಸ್ಥಳವಾದಲ್ಲಿ ಆಯಾ ವಿಭಾಗದ ಡಿ.ಸಿ.ಪಿ. ಯವರ ಕಾರ್ಯ ವ್ಯಾಪ್ತಿಯನ್ನು ಸ್ವಸ್ಥಳ ಎಂದು ಪರಿಗಣಿಸುವುದು.

5) ಪೊಲೀಸ್ ನಿರೀಕ್ಷಕರ ಹುದ್ದೆಯಿಂದ ಪೊಲೀಸ್ ಉಪಾಧೀಕ್ಷಕರ ಹುದ್ದೆಗೆ ಬಡ್ತಿ ಹೊಂದಿದಾಗ ಪ್ರತಿಯೊಬ್ಬ ಅಧಿಕಾರಿಯು ಕನಿಷ್ಠ 1 ವರ್ಷ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು.

6) ಬಡ್ತಿ ಹೊಂದಿದ ಪ್ರತಿಯೊಬ್ಬ ಪೊಲೀಸ್ ಉಪಾಧೀಕ್ಷಕರು ಕಡ್ಡಾಯವಾಗಿ 4 ವಾರಗಳ ಪುನರ್ಮನನ ತರಬೇತಿಯನ್ನು ಬಡ್ತಿ ಹೊಂದಿದ 1 ವರ್ಷದೊಳಗಾಗಿ ಪಡೆಯಬೇಕು. ಯಾವುದೇ ಪೊಲೀಸ್ ಉಪಾಧೀಕ್ಷಕರು 4 ವಾರಗಳ ಪುನರ್ಮನನ ತರಬೇತಿಯನ್ನು ಕಾಲ ಕಾಲಕ್ಕೆ ನಿಯಮಿಸುವ ನಿಯಮಗಳಂತೆ ಮುಗಿಸದ ಹೊರತು ಕಾರ್ಯಕಾರಿ ಹುದ್ದೆಗೆ ನೇಮಿಸುವಂತಿಲ್ಲ.

7) ಪೊಲೀಸ್ ಉಪಾಧೀಕ್ಷಕರು, ಅವರ ವಿರುದ್ಧ ಯಾವದೇ ಪ್ರಮುಖ ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣ ಅಥವಾ ವಿಚಾರಣೆಯಲ್ಲಿರುವ ಅಪರಾಧ ಪ್ರಕರಣ ಅಥವಾ ಪೊಲೀಸ್ ಸಿಬ್ಬಂದಿ ಮಂಡಳಿಯು ಅವರು ಅನರ್ಹ ಎಂದು ಪರಿಗಣಿಸಿದ್ದಲ್ಲಿ, ಅಂತಹ ಅಧಿಕಾರಿಯನ್ನು ಕಾರ್ಯಕಾರಿ ಹುದ್ದೆಗೆ ನೇಮಿಸುವಂತಿಲ್ಲ.

(ದೇವೇಂದ್ರಪ್ಪ ಕಟ್ಟಿಮನಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು-ಎ)

16/9

ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಜ 2014, ದಿನಾಂಕ: 16-09-2014ಕ್ಕೆ

## ಅನುಬಂಧ-2

### (ಪೊಲೀಸ್ ನಿರೀಕ್ಷಕರ ಹುದ್ದೆಗಳು (ಸಿವಿಲ್))

1) ಪೊಲೀಸ್ ನಿರೀಕ್ಷಕರಾಗಿ ಕಾರ್ಯಕಾರಿ ಹುದ್ದೆಯಲ್ಲಿ ಗರಿಷ್ಠ ಸೇವಾ ಅವಧಿ 8 ವರ್ಷಗಳು ಪೂರೈಸಿರಬೇಕು.

2) ಪೊಲೀಸ್ ನಿರೀಕ್ಷಕರಾಗಿ ಕಾರ್ಯಕಾರಿ ಹುದ್ದೆಯಲ್ಲಿ ಗರಿಷ್ಠ 3 ವರ್ಷ ಮತ್ತು ಕಾರ್ಯಕಾರ್ಯೇತರ ಹುದ್ದೆಯಲ್ಲಿ ಗರಿಷ್ಠ 4 ವರ್ಷ ಸೇವಾ ಅವಧಿಯನ್ನು ಪ್ರತಿ ಹುದ್ದೆಯಲ್ಲಿ ಸಲ್ಲಿಸಿರಬೇಕು.

3) ಪೊಲೀಸ್ ನಿರೀಕ್ಷಕರು (ಸಿವಿಲ್) ರವರು ಅನುಕ್ರಮವಾಗಿ 3 ಹುದ್ದೆಗಳಲ್ಲಿ ಅಥವಾ ಗರಿಷ್ಠ 8 ವರ್ಷಗಳ ಕಾಲ ಕಾರ್ಯಕಾರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುವವರು ಕಡ್ಡಾಯವಾಗಿ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು.

4) ಪೊಲೀಸ್ ನಿರೀಕ್ಷಕರು ಅನುಕ್ರಮವಾಗಿ 3 ಹುದ್ದೆಗಳಲ್ಲಿ ಅಥವಾ ಗರಿಷ್ಠ 8 ವರ್ಷಗಳ ಕಾಲ ಕಾರ್ಯಕಾರ್ಯೇತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುವವರು ಕಡ್ಡಾಯವಾಗಿ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಒಂದು ವೇಳೆ ಅವರು ಸ್ವತಃ ಲಿಖಿತ ಮೂಲಕ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸದ ಹೊರತು ಕಾರ್ಯಕಾರಿ ಹುದ್ದೆಯಲ್ಲಿಯೇ ಕರ್ತವ್ಯ ನಿರ್ವಹಿಸಬೇಕು.

5) ಪೊಲೀಸ್ ನಿರೀಕ್ಷಕರು ಅವರ ಸ್ವಸ್ಥಳದ ಉಪ ವಿಭಾಗದಲ್ಲಿ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಕೂಡದು. ಬೆಂಗಳೂರು ನಗರ ಸ್ವಸ್ಥಳವಾದಲ್ಲಿ ಆಯಾ ವಿಭಾಗದ ಡಿ.ಸಿ.ಪಿ. ಯವರ ಕಾರ್ಯ ವ್ಯಾಪ್ತಿಯನ್ನು ಸ್ವಸ್ಥಳ ಎಂದು ಪರಿಗಣಿಸುವುದು.

6) ಪೊಲೀಸ್ ಉಪ ನಿರೀಕ್ಷಕರ ಹುದ್ದೆಯಿಂದ ಪೊಲೀಸ್ ನಿರೀಕ್ಷಕರ ಹುದ್ದೆಗೆ ಬಡ್ತಿ ಹೊಂದಿದಾಗ ಪ್ರತಿಯೊಬ್ಬ ಅಧಿಕಾರಿಯು ಕನಿಷ್ಠ 1 ವರ್ಷ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು.

7) ಬಡ್ತಿ ಹೊಂದಿದ ಪ್ರತಿಯೊಬ್ಬ ಪೊಲೀಸ್ ನಿರೀಕ್ಷಕರು ಕಡ್ಡಾಯವಾಗಿ 4 ವಾರಗಳ ಪುನರ್ಮನನ ತರಬೇತಿಯನ್ನು ಬಡ್ತಿ ಹೊಂದಿದ 1 ವರ್ಷದೊಳಗಾಗಿ ಪಡೆಯಬೇಕು. ಯಾವುದೇ ಪೊಲೀಸ್ ನಿರೀಕ್ಷಕರು 4 ವಾರಗಳ ಪುನರ್ಮನನ ತರಬೇತಿಯನ್ನು ಕಾಲ ಕಾಲಕ್ಕೆ ನಿಯಮಿಸುವ ನಿಯಮಗಳಂತೆ ಮುಗಿಸದ ಹೊರತು ಕಾರ್ಯಕಾರಿ ಹುದ್ದೆಗೆ ನೇಮಿಸುವಂತಿಲ್ಲ.

8) ಪೊಲೀಸ್ ನಿರೀಕ್ಷಕರು, ಅವರ ವಿರುದ್ಧ ಯಾವದೇ ಪ್ರಮುಖ ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣ ಅಥವಾ ವಿಚಾರಣೆಯಲ್ಲಿರುವ ಅಪರಾಧ ಪ್ರಕರಣ ಅಥವಾ ಪೊಲೀಸ್ ಸಿಬ್ಬಂದಿ ಮಂಡಳಿಯು ಅವರು ಅನರ್ಹ ಎಂದು ಪರಿಗಣಿಸಿದ್ದಲ್ಲಿ, ಅಂತಹ ಅಧಿಕಾರಿಯನ್ನು ಕಾರ್ಯಕಾರಿ ಹುದ್ದೆಗೆ ನೇಮಿಸುವಂತಿಲ್ಲ.

(ದೇವೇಂದ್ರಪ್ಪ ಕಟ್ಟಿಮನಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು-ಎ)

ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಆ 2014, ದಿನಾಂಕ: 16-09-2014ಕ್ಕೆ

ಅನುಬಂಧ-3

(ಪೊಲೀಸ್ ಉಪ ನಿರೀಕ್ಷಕರ ಹುದ್ದೆಗಳು (ಸಿವಿಲ್))

1) ಪೊಲೀಸ್ ಉಪನಿರೀಕ್ಷಕರಾಗಿ ಕಾರ್ಯಕಾರಿ ಹುದ್ದೆಯಲ್ಲಿ ಗರಿಷ್ಠ ಸೇವಾ ಅವಧಿ 8 ವರ್ಷಗಳು ಪೂರೈಸಿರಬೇಕು.
2) ಪೊಲೀಸ್ ನಿರೀಕ್ಷಕರಾಗಿ ಕಾರ್ಯಕಾರಿ ಹುದ್ದೆಯಲ್ಲಿ ಗರಿಷ್ಠ 3 ವರ್ಷ ಮತ್ತು ಕಾರ್ಯಕಾರ್ಯೇತರ ಹುದ್ದೆಯಲ್ಲಿ ಗರಿಷ್ಠ 4 ವರ್ಷ ಸೇವಾ ಅವಧಿಯನ್ನು ಪ್ರತಿ ಹುದ್ದೆಯಲ್ಲಿ ಸಲ್ಲಿಸಿರಬೇಕು.
3) ಪೊಲೀಸ್ ಉಪನಿರೀಕ್ಷಕರು (ಸಿವಿಲ್) ರವರು ಅನುಕ್ರಮವಾಗಿ 3 ಹುದ್ದೆಗಳಲ್ಲಿ ಅಥವಾ ಗರಿಷ್ಠ 8 ವರ್ಷಗಳ ಕಾಲ ಕಾರ್ಯಕಾರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುವವರು ಕಡ್ಡಾಯವಾಗಿ ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು.
4) ಪೊಲೀಸ್ ಉಪನಿರೀಕ್ಷಕರು ಅನುಕ್ರಮವಾಗಿ 3 ಹುದ್ದೆಗಳಲ್ಲಿ ಅಥವಾ ಗರಿಷ್ಠ 8 ವರ್ಷಗಳ ಕಾಲ ಕಾರ್ಯಕಾರ್ಯೇತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುವವರು ಕಡ್ಡಾಯವಾಗಿ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಬೇಕು. ಒಂದು ವೇಳೆ ಅವರು ಸ್ವತಃ ಲಿಖಿತ ಮೂಲಕ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸದ ಹೊರತು ಕಾರ್ಯಕಾರಿ ಹುದ್ದೆಯಲ್ಲಿಯೇ ಕರ್ತವ್ಯ ನಿರ್ವಹಿಸಬೇಕು.
5) ಪೊಲೀಸ್ ಉಪನಿರೀಕ್ಷಕರು ಅವರ ಸ್ವಸ್ಥಳದ ಉಪ ವಿಭಾಗದಲ್ಲಿ ಕಾರ್ಯಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಕೂಡದು.
6) ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ಪೊಲೀಸ್ ಉಪನಿರೀಕ್ಷಕರಾಗಿ ಬಡ್ತಿ ಹೊಂದಿದ ನಂತರ, ಕಡ್ಡಾಯವಾಗಿ 4 ವಾರಗಳ ಪುನರ್ಮನನ ತರಬೇತಿಯನ್ನು ಬಡ್ತಿ ಹೊಂದಿದ 1 ವರ್ಷದೊಳಗಾಗಿ ಪಡೆಯಬೇಕು.
7) ಪೊಲೀಸ್ ಉಪನಿರೀಕ್ಷಕರು, ಅವರ ವಿರುದ್ಧ ಯಾವದೇ ಪ್ರಮುಖ ಇಲಾಖಾ ವಿಚಾರಣೆ, ಲೋಕಾಯುಕ್ತ ಪ್ರಕರಣ ಅಥವಾ ವಿಚಾರಣೆಯಲ್ಲಿರುವ ಅಪರಾಧ ಪ್ರಕರಣ ಅಥವಾ ಪೊಲೀಸ್ ಸಿಬ್ಬಂದಿ ಮಂಡಳಿಯು ಅವರು ಅನರ್ಹ ಎಂದು ಪರಿಗಣಿಸಿದ್ದಲ್ಲಿ, ಅಂತಹ ಅಧಿಕಾರಿಯನ್ನು ಕಾರ್ಯಕಾರಿ ಹುದ್ದೆಗೆ ನೇಮಿಸುವಂತಿಲ್ಲ.

(ದೇವೆಂದ್ರಪ್ಪ ಕಟ್ಟಿಮನಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು-ಎ)

16/9

ಸರ್ಕಾರದ ಆದೇಶ ಸಂಖ್ಯೆ: ಒಇ 111 ಪೊಸಇ 2014, ದಿನಾಂಕ: 15-09-2014ಕ್ಕೆ

## ಅನುಬಂಧ-4

### (ಪೊಲೀಸ್ ಎ.ಎಸ್.ಐ/ಹೆಚ್.ಸಿ/ಪಿ.ಸಿ (ಸಿವಿಲ್)

1) ಪೊಲೀಸ್ ಎ.ಎಸ್.ಐ/ಹೆಚ್.ಸಿ/ಪಿ.ಸಿ. (ಸಿವಿಲ್) ರವರು ಸಾಮಾನ್ಯವಾಗಿ 5 ವರ್ಷಗಳ ಕಾಲ ಪ್ರತಿ ಹುದ್ದೆಯಲ್ಲಿ ಸೇವೆ ಸಲ್ಲಿಸಬೇಕು.
2) ಪೊಲೀಸ್ ಎ.ಎಸ್.ಐ/ಹೆಚ್.ಸಿ/ಪಿ.ಸಿ. (ಸಿವಿಲ್)ರವರುಗಳು ಸೇವೆಯು ಗರಿಷ್ಠ ಕಾಲಾವಧಿ 6 ವರ್ಷಗಳ ಕಾಲ ಮೀರತಕ್ಕದ್ದಲ್ಲ.
3) ಪೊಲೀಸ್ ಎ.ಎಸ್.ಐ/ಹೆಚ್.ಸಿ/ಪಿ.ಸಿ. (ಸಿವಿಲ್) ರವರು ತಮ್ಮ ಸ್ವಗೃಹದ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಬಾರದು.
4) ಹೆಚ್.ಸಿ. ಮತ್ತು ಪಿ.ಸಿ. ರವರುಗಳು ಬಡ್ತಿ ಹೊಂದಿದ ನಂತರ, ಕಡ್ಡಾಯವಾಗಿ 2 ವಾರಗಳ ಪುನರ್ಮನನ ತರಬೇತಿಯನ್ನು ಬಡ್ತಿ ಹೊಂದಿದ 1 ವರ್ಷದೊಳಗಾಗಿ ಪಡೆಯಬೇಕು.

(ದೇವೇಂದ್ರಪ್ಪ ಕಟ್ಟಿಮನಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ. (ಪೊಲೀಸ್ ಸೇವೆಗಳು-ಎ)

16/9

## ಅನುಬಂಧ–ಸಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 187 (227)ರ ಉಪ ಪ್ರಶ್ನೆ (ಉ)ಗೆ ಸಂಬಂಧಿಸಿದಂತೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪೊಲೀಸ್ ಠಾಣೆಗಳ ವಿವರ ಮತ್ತು ಅವುಗಳಲ್ಲಿ ಒಂದೇ ಠಾಣೆಯಲ್ಲಿ ಐದು ವರ್ಷಕ್ಕಿಂತ ಜಾಸ್ತಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆಯನ್ನು ಈ ಕೆಳಕಂಡಂತೆ ನೀಡಲಾಗಿದೆ.

## ಉಡುಪಿ ಜಿಲ್ಲೆ

| ಕ್ರ ಸಂ | ಪೊಲೀಸ್ ಠಾಣೆಯ ಹೆಸರು | ಒಂದೇ ಠಾಣೆಯಲ್ಲಿ ಐದು ವರ್ಷಕ್ಕಿಂತ ಜಾಸ್ತಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | | |
|---|---|---|---|---|
| | | ಎಎಸ್ಐ | ಹೆಚ್‌ಸಿ | ಪಿಸಿ |
| 1. | ಉಡುಪಿ ನಗರ ಠಾಣೆ | 1 | 4 | 8 |
| 2. | ಉಡುಪಿ ಸಂಚಾರ ಠಾಣೆ | 1 | 3 | 3 |
| 3. | ಮಲ್ಪೆ ಠಾಣೆ | 1 | 5 | 5 |
| 4. | ಮಹಿಳಾ ಠಾಣೆ | 0 | 0 | 9 |
| 5. | ಮಣಿಪಾಲ ಠಾಣೆ | 0 | 4 | 16 |
| 6. | ಬ್ರಹ್ಮಾವರ ಠಾಣೆ | 0 | 0 | 0 |
| 7. | ಕೋಟ ಠಾಣೆ | 0 | 3 | 2 |
| 8. | ಹಿರಿಯಡ್ಕ ಠಾಣೆ | 1 | 0 | 3 |
| 9. | ಕಾರ್ಕಳ ನಗರ ಠಾಣೆ | 1 | 3 | 7 |
| 10. | ಕಾರ್ಕಳ ಗ್ರಾಮಾಂತರ ಠಾಣೆ | 0 | 2 | 7 |
| 11. | ಹೆಬ್ರಿ ಠಾಣೆ | 1 | 1 | 4 |
| 12. | ಅಜೆಕಾರು ಠಾಣೆ | 1 | 1 | 3 |
| 13. | ಶಿರ್ವ ಟಾಣೆ | 1 | 1 | 12 |
| 14. | ಪಡುಬಿದ್ರೆ ಠಾಣೆ | 2 | 6 | 11 |
| 15. | ಕಾಪು ಠಾಣೆ | 1 | 5 | 9 |
| 16. | ಕುಂದಾಪುರ ಠಾಣೆ | 2 | 2 | 7 |
| 17. | ಕುಂದಾಪುರ ಸಂಚಾರ ಠಾಣೆ | 1 | 7 | 1 |
| 18. | ಕುಂದಾಪುರ ಗ್ರಾಮಾಂತರ ಠಾಣೆ | 1 | 3 | 8 |
| 19. | ಶಂಕರನಾರಾಯಣ ಠಾಣೆ | 0 | 5 | 0 |
| 20. | ಅಮಾಸೆಬೈಲು ಠಾಣೆ | 1 | 1 | 2 |
| 21. | ಬೈಂದೂರು ಠಾಣೆ | 0 | 0 | 5 |
| 22. | ಗಂಗೊಳ್ಳಿ ಠಾಣೆ | 0 | 2 | 5 |
| 23. | ಕೊಲ್ಲೂರು ಠಾಣೆ | 1 | 5 | 4 |
| 24. | ಸೆನ್ ಅಪರಾಧ ಠಾಣೆ | 1 | 6 | 1 |
| | ಒಟ್ಟು | **18** | **69** | **132** |

## ದಕ್ಷಿಣ ಕನ್ನಡ ಜಿಲ್ಲೆ

| ಕ್ರ ಸಂ | ಪೊಲೀಸ್ ಠಾಣೆಯ ಹೆಸರು | ಒಂದೇ ಠಾಣೆಯಲ್ಲಿ ಐದು ವರ್ಷಕ್ಕಿಂತ ಜಾಸ್ತಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | | |
|---|---|---|---|---|
| | | ಎಎಸ್ಐ | ಹೆಚ್‌ಸಿ | ಪಿಸಿ |
| 1. | ಸುಳ್ಯ ಪೊಲೀಸ್ ಠಾಣೆ | 0 | 14 | 12 |
| 2. | ಸುಬ್ರಮಣ್ಯ ಠಾಣೆ | 1 | 4 | 5 |
| 3. | ಬೆಳ್ಳಾರೆ ಪೊಲೀಸ್ ಠಾಣೆ | 0 | 5 | 11 |
| 4. | ಪುತ್ತೂರು ನಗರ ಠಾಣೆ | 1 | 4 | 6 |
| 5. | ಪುತ್ತೂರು ಗ್ರಾಮಾಂತರ | 0 | 3 | 6 |
| 6. | ಕಡಬ ಪೊಲೀಸ್ ಠಾಣೆ | 0 | 3 | 2 |
| 7. | ಉಪ್ಪಿನಂಗಡಿ ಠಾಣೆ | 0 | 3 | 6 |
| 8. | ಬಂಟ್ವಾಳ ನಗರ ಠಾಣೆ | 0 | 0 | 19 |
| 9. | ಬಂಡ್ವಾಳ ಗ್ರಾಮಾಂತರ | 0 | 3 | 9 |
| 10. | ವಿಟ್ಲ ಠಾಣೆ | 1 | 2 | 8 |
| 11. | ಬೆಳ್ತಂಗಡಿ ಠಾಣೆ | 0 | 0 | 10 |
| 12. | ಧರ್ಮಸ್ಥಳ ಠಾಣೆ | 0 | 0 | 6 |
| 13. | ವೇಣೂರು ಠಾಣೆ | 0 | 3 | 3 |
| 14. | ಪುಂಜಾಲಕಟ್ಟೆ ಠಾಣೆ | 0 | 0 | 3 |
| 15. | ಮಹಿಳಾ ಠಾಣೆ ಪುತ್ತೂರು | 2 | 0 | 4 |
| 16. | ಪುತ್ತೂರು ಸಂಚಾರ ಠಾಣೆ | 0 | 2 | 4 |
| 17. | ಬಂಡ್ವಾಳ ಸಂಚಾರ ಠಾಣೆ | 0 | 0 | 8 |
| 18. | ಬೆಳ್ತಂಗಡಿ ಸಂಚಾರ ಠಾಣೆ | 1 | 6 | 3 |
| 19. | ಸಿಇಎನ್ ಪೊಲೀಸ್ ಠಾಣೆ | 0 | 1 | 0 |
| | ಒಟ್ಟು | 6 | 53 | 125 |